ಪ್ಲೇಟನ್ನು ಹಿಡಿದು ಸರತಿ ಸಾಲಿನಲ್ಲಿ ಮುಂದೆ ಮುಂದೆ ಸಾಗುವಾಗ ಪೂರಿ–ಸಾಗು ನೀಡುತ್ತಿದ್ದವರನ್ನು ನೋಡಿದೆ. ಅರೆ, ಅದೇ ಜನ! 'ಬನ್ನಿ ಬನ್ನಿ ತಗೊಳ್ಳಿ, ಒಂದೇ ಪುರಿ ಸಾಕಾ ಸಾರ್? ಏನು ಡಯಟ್ಟಾ?' ಅಂತ ತಮಾಶೆ ಮಾಡುತ್ತ ಅತಿಥಿಗಳನ್ನು ಪ್ರೀತಿಯಿಂದ ಉಪಚರಿಸುತ್ತಿದ್ದಾರೆ. ಮೊಗದಲ್ಲಿ ಪ್ರಸನ್ನಭಾವ. ಅಲ್ಲಿ ಒಂದಿನಿತೂ ಆಯಾಸದ ಸೋಂಕಿಲ್ಲ. ನನ್ನ ಹೆಂಡತಿಯೂ ಅವರು ಇಲ್ಲಿಯೂ ಇದ್ದಾರೆ, ಮಾರಾಯ್ರೆ' ಅಂದಳು ಕಣ್ಣರಳಿಸುತ್ತ. ಊಟ ಗಡದ್ದಾಗಿತ್ತು. ಚಿರೋಟಿ, ಮೈಸೂರುಪಾಕು, ಪೂರಿ–ಸಾಗು, ದ್ರಾಕ್ಷಿ–ಗೋಡಂಬಿ ಮಿಶ್ರಿತ ಗಸಗಸೆ ಪಾಯಸ, ಚಿತ್ರಾನ್ನ, ಆಲೂಬೋಂಡಾ, ಟೊಮೊಟೊಬಾತ್, ಮೊಸರನ್ನ, ತಿಳಿಸಾರು, ಪಳದ್ಯ, ಐಸ್‌ಕ್ರೀಮ್ ಜೊತೆಗೆ ಸ್ವೀಟ್ ಪಾನ್ ಬೀಡಾ. ನನ್ನ ಶ್ರೀಮತಿಯಂತೂ ಛತ್ರದ ಸಾಲಂಕೃತ ವೈಭವ, ಊಟದ ಸೊಗಸು, ವಧೂ–ವರರ ಅಂದ–ಚೆಂದ, ಸೀರೆ, ಆಭರಣಗಳ ಭ್ರಮಾ ಜಗತ್ತಿನಲ್ಲಿ ಕಳೆದು ಹೋಗಿದ್ದರೆ, ಮಕ್ಕಳು ಮೊಬೈಲ್, ವಾಟ್ಸ್ಆ್ಯಪ್ ಜೊತೆ ಡೋರೆಮಾನ್, ಛೋಟಾ ಭೀಮ್, ಸ್ಪೈಡರ್‌ಮ್ಯಾನ್‌ಗಳ ಕಿನ್ನರ ಲೋಕದ ವಿಚಾರ–ವಿನಿಮಯದಲ್ಲಿ ತಮ್ಮನ್ನು ತಾವೇ ಮರೆತಿದ್ದರು. ಇವರೆಲ್ಲರನ್ನೂ ಎಬ್ಬಿಸಿ ಮನೆಗೆ ಮರಳುವ ಧಾವಂತದಲ್ಲಿರುವ ನನಗೆ ಒಮ್ಮೆ ಇಂದ್ರಕುಮಾರನನ್ನು ಭೇಟಿಯಾಗುವ ಕುತೂಹಲವೂ ಕಾಡುತ್ತಿತ್ತು. ಅಷ್ಟರಲ್ಲಿ ಅನತಿ ದೂರದಲ್ಲಿ ಸೀತಣ್ಣನ ಅರ್ಧಬೋಳು ತಲೆ ಹೊಳೆದು ಅವರನ್ನು ಮಾತನಾಡಿಸಲು ಅತ್ತ ಧಾವಿಸಿದೆ. ಅವರು ನನ್ನತ್ತ ತಿರುಗಿ, 'ಇದೀಗ ಇನ್ನೂ ಎಂಟುವರೆ ಮಾರಾಯ್ರೆ, ನಿಮಗೆ ಹೇಗೂ ಕಾರು ಉಂಟಲ್ಲವೋ? ನಿಮ್ಮ ಏರಿಯಾಕ್ಕೆ ಮುಕ್ಕಾಲು ಗಂಟೆ ದಾರಿ. ಈಗ ಟ್ರಾಫಿಕ್ಕೂ ಇರುವುದಿಲ್ಲ, ಗೊತ್ತುಂಟಾ? ಸೊಲ್ಪ ಹೊತ್ತು ಮಾತನಾಡುವ, ಇರಿ' ಅಂತೆಲ್ಲ ಒತ್ತಾಯಿಸಿದರು. ಆದರೆ ನನಗೆ ಅವರ ಮಾತಿನ ಬಗ್ಗೆ ಲಕ್ಷ್ಯವಿರಲಿಲ್ಲ. 'ನಂಗೆ ಒಮ್ಮೆ ಇಂದ್ರಕುಮಾರರನ್ನು ಭೇಟಿ ಆಗಬೇಕಿತ್ತು' ಅಂದೆ. ಸೀತಣ್ಣ 'ಓ ಅವರಾ? ಅವರು ಆಗಲೇ ಹೋಗಿಯಾಯ್ತು ಮಾರ್‍ರೆ, ಅವರ ಹೆಂಡತಿ– ಅಲ್ಲಲ್ಲ ಗರ್ಲ್‌ಫ್ರೆಂಡ್ ಸಕಲೇಶಪುರದಲ್ಲಿ ಟ್ರೆಕ್ಕಿಂಗಿಗೆ ಅಂತ ಹೋದವರಿಗೆ ಸಣ್ಣ ಎಕ್ಸಿಡೆಂಟ್ ಆಯ್ತಂತೆ. ಇದೀಗ ಒಂದರ್ಧ ಗಂಟೆ ಹಿಂದೆ ಫೋನ್ ಬಂತು. ಆಸಾಮಿ ಊಟ ಸಹ ಮಾಡದೇ ಸಟಕ್ಕಂತ ಎದ್ದು ಹೊರಟಾಯ್ತು, ನೋಡಿ' ಅಂತೆಲ್ಲ ವಿವರಿಸಿದರು. ಆದಾಗಲೇ ನನ್ನ ಬೆನ್ನ ಹಿಂದೇ ಬಂದು ನಿಂತ ನನ್ನ ಹೆಂಡತಿ, 'ಅಂದ್ರೆ ಇಂದ್ರಕುಮಾರ್ ಲಗ್ನ ಆಗಿಲ್ಲವಾ?' ಅಂತ ಹುಬ್ಬೇರಿಸಿದಳು. ಸೀತಣ್ಣ ಸಾವಧಾನವಾಗಿ, 'ಇಲ್ಲ, ಅದೊಂದು ದೊಡ್ಡ ಕತೆ. ನಂಗೆ ಈಗ ಅದನ್ನೆಲ್ಲ ಹೇಳಲಿಕ್ಕೆ ಪುರುಸೊತ್ತಿಲ್ಲಮ್ಮ ಇನ್ನೊಮ್ಮೆ ನೋಡುವಾ, ಆಯ್ತಾ? ನೀವು ಇರಿ, ಬಂದೆ' ಅನ್ನುತ್ತ 'ಏ, ಗಣೇಶಾ, ಅಲ್ಲಿ ಅಡುಗೆ ಶ್ಯಾಮಭಟ್ಟರಿದ್ದಾರಾ?' ಅಂತ ವಿಚಾರಿಸುತ್ತ ಜಾಗ ಖಾಲಿ ಮಾಡಿದರು.

ಇಂದ್ರಕುಮಾರ್ ಎನ್ನುವ ವ್ಯಕ್ತಿ ನನಗೆ ಇನ್ನೂ ಕಗ್ಗಂಟಾದರು.

★★★

ದೈನಂದಿನ ಏಕತಾನತೆಯಲ್ಲಿ ಶೇವಣಿ ಸಪ್ತಾಹದ ಸುತ್ತಾಣದಲ್ಲಿ, ಮನೆಯಲ್ಲಿ ಮಕ್ಕಳ ಜಗಳ, ರಗಳೆ, ರಂಪ–ರಾದ್ಧಾಂತಗಳಲ್ಲಿ, ಬದುಕಿನಲ್ಲಿ ಏನಾದರೂ ವಿಶಿಷ್ಟವಾದದ್ದನ್ನು ಸಾಧಿಸಲೇಬೇಕೆನ್ನುವ ಆಂತರ್ಯದ ಅರ್ಥವಾಗದ ತುಡಿತದಲ್ಲಿ ನನಗೆ ದಿನಗಳು ಉರುಳಿದ್ದೇ ಅರಿವಾಗಲಿಲ್ಲ. ಬಹುಶಃ ಎರಡು–ಮೂರು ತಿಂಗಳುಗಳೇ ಉರುಳಿ ಹೋಗಿರಬಹುದು. ಒಂದು ದಿನ ಸಂಜೆ ನಾಲ್ಕು ಗಂಟೆಯ ಸಮಯ. ಬ್ಯಾಂಕಿನ ಚಟುವಟಿಕೆಗಳು ಹೆಚ್ಚು ಕಡಿಮೆ ಸ್ತಬ್ಧವಾಗುವ ಹಂತದಲ್ಲಿದ್ದಾಗ ಸೀತಣ್ಣನ ಫೋನ್. 'ಹಲೋ, ಮೂರ್ತಿಯಾ? ಏನಿಲ್ಲ, ಕೆ.ಆರ್. ಪುರದಲ್ಲಿ ನನ್ನ ತಂಗಿ ಸುಗುಣ ಇದ್ದಾಳಲ್ಲ. ಅವಳ ಮನೆಯಲ್ಲಿ ಇಂದು ನಡೆಯುವ ಸತ್ಯನಾರಾಯಣ ಪೂಜೆಗೆ